ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ನ್ಯಾಯಾಲಯ,ಅಂಕೋಲಾ.

ಓ. ಎಸ್.ನಂಬರ್ಃ 31–2015

ಪಿ.ಡಬ್ಲ್ಯೂ ಃ 3

ಪ್ರಮಾಣ ವಚನ 16.8.2018

ಭೋದಿಸಿದ ದಿನಾಂಕ ಃ

ಸಾಕ್ಷಿಯ ಹೆಸರು ಃ ಗೋಪಾಲ

ತಂದೆಯ ಹೆಸರು ಃ ವೆಂಕಟರಮಣ ನಾಯ್ಕ

ವಯಸ್ಸು ಃ 50 ವರ್ಷ

ಉದ್ಯೋಗ ಃ ರೈತಾಪಿ

ವಿಳಾಸ ಃ ಬೆಲೆಕೇರಿ, ಅಂಕೋಲಾ ತಾಃ

ಮುಖ್ಯ ವಿಚಾರಣೆಃ ಶ್ರೀ ಎಂ ಪಿ ಬಿ ವಕೀಲರಿಂದಃ

ನನಗೆ ವಾದಿಯರ ಹಾಗೂ ಪ್ರತಿವಾದಿಯರ ಪರಿಚಯ ಇರುತ್ತದೆ. ನನ್ನ ಮನೆ ವಾದಿಯರ ಮನೆಯಿಂದ ಅಂದಾಜು 125 ಪುಟು ದೂರದಲ್ಲಿ ಇರುತ್ತದೆ. ವಾದಿ ಮತ್ತು ಪ್ರತಿವಾದಿಯರ ಜಮೀನಿನ ನಡುವೆ ಬಾವಿ ಇರುತ್ತದೆ. ಬಾವಿ ನೀರನ್ನು ನಾನು ನೋಡಿದಂತೆ ವಾದಿಯರು ಹಾಗೂ ಪ್ರತಿವಾದಿಯರು ಉಪಯೋಗಿಸುತ್ತಾರೆ. ಮೊದಲು ಬಾವಿ ನೀರನ್ನು ಗಡಗಡೆ ಮುಖಾಂತರ ಉಪಯೋಗಿಸುತ್ತಿದ್ದರು. ಈಗ ಸದರ ಬಾವಿಗೆ ವಿದ್ಯೂತ್ ಪಂಪ್‌ನ್ನು ಹಾಕಿರುತ್ತಾರೆ. ಅದರ ಮುಖಾಂತರ ನೀರನ್ನು ಪಡೆಯುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಜಮೀನಿನ ಮದ್ಯೆ ನಾಗರಕಟ್ಟೆ ಇರುತ್ತದೆ. ಅದನ್ನು ವಾದಿ ಹಾಗೂ ಪ್ರತಿವಾದಿಯರು ಪೂಜೆ ಮಾಡುತ್ತಿದ್ದರು. 3ನೇ ವಾದಿ ನನಗೆ ಖಾಸಾ ಬಾವನಾಗಿರುತ್ತಾನೆ. ನಾನು 3ನೇ ವಾದಿಯ ಮನೆಗೆ ಹೋಗಿ ಬಂದು ಮಾಡುತ್ತಿದ್ದೇನು.

ಪಾಟೀ ಸವಾಲುಃ ಶ್ರೀಮತಿ ಎಸ್ ಎನ್ ಹೆಚ್ ವಕೀಲರಿಂದಃ ( ಪಾಟೀ ಸವಾಲಿಗೆ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಅಂಕೋಲಾ.

ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ನ್ಯಾಯಾಲಯ,ಅಂಕೋಲಾ.

ಓ. ಎಸ್.ನಂಬರ್ಃ 31–2015

ಪಿ.ಡಬ್ಲ್ಯೂ ಃ 2

ಪ್ರಮಾಣ ವಚನ 16.8.2018

ಭೋದಿಸಿದ ದಿನಾಂಕ ಃ

ಸಾಕ್ಷಿಯ ಹೆಸರು ಃ ವೆಂಕಟರಮಣ

ತಂದೆಯ ಹೆಸರು ಃ ರಾಮಾ ನಾಯ್ಕ

ವಯಸ್ಸು ಃ 66 ವರ್ಷ

ಉದ್ಯೋಗ ಃ ರೈತಾಪಿ

ವಿಳಾಸ ಃ ಬೆಲೆಕೇರಿ, ಅಂಕೋಲಾ ತಾಃ

<u>ಮುಖ್ಯ ವಿಚಾರಣೆಃ ಶ್ರೀ ಎಂ ಪಿ ಬಿ ವಕೀಲರಿಂದಃ</u>

ನನಗೆ ವಾದಿಯರ ಹಾಗೂ ಪ್ರತಿವಾದಿಯರ ಪರಿಚಯ ಇರುತ್ತದೆ. ನನ್ನ ಮನೆ ವಾದಿಯರ ಮನೆಯಿಂದ 100 ಮೀಟರ ದೂರದಲ್ಲಿ ಇರುತ್ತದೆ. ವಾದಿಯರ ಹಾಗೂ ಪ್ರತಿವಾದಿಯರ ಮನೆಯನ್ನು ನೋಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ಜಮೀನಿನ ನಡುವೆ ಇರುವ ಬಾವಿ ಮತ್ತು ನಾಗರಕಟ್ಟೆ ಇರುವುದನ್ನು ನೋಡಿರುತ್ತೇನೆ. ಬಾವಿ ನೀರನ್ನು ನಾನು ನೋಡಿದಂತೆ ವಾದಿ ಹಾಗೂ ಪ್ರತಿವಾದಿಯರು ಉಪಯೋಗಿಸುತ್ತಾರೆ. ಮೊದಲು ಬಾವಿ ನೀರನ್ನು ಗಡಗಡೆ ಮುಖಾಂತರ ಉಪಯೋಗಿಸುತ್ತಿದ್ದರು. ಈಗ ಸದರ ಬಾವಿಗೆ ವಿದ್ಯುತ್ ಪಂಪ್‌ನ್ನು ಹಾಕಿರುತ್ತಾರೆ. ನಾಗರಕಟ್ಟೆ ಬಾವಿ ಹತ್ತಿರ ಇರುತ್ತದೆ. ನಾಗರಕಟ್ಟೆಯ ಪೂಜೆಯನ್ನು ವಾದಿ ಹಾಗೂ ಪ್ರತಿವಾದಿಯರು ಮಾಡುತ್ತಾರೆ. ಪ್ರತಿವಾದಿಯರ ತಾಯಿ ವಾದಿಯರ ತಂದೆಯ ಅಣ್ಣನ ಮಗಳಾಗಿರುತ್ತಾಳೆ.

ಪಾಟೀ ಸವಾಲುಃ ಶ್ರೀಮತಿ ಎಸ್ ಎನ್ ಹೆಚ್ ವಕೀಲರಿಂದಃ ( ಪಾಟೀ ಸವಾಲಿಗೆ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಅಂಕೋಲಾ.